# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ, ಎನ್. ಆರ್. ಚೌಕ, ಬೆಂಗಳೂರು–560002.**

ಸಂಖ್ಯೆ: ವಿ.ಆ/ಘ.ತ್ಯಾ.ನಿ/ಪಿಆರ್/F-1486 /15–16 ದಿನಾಂಕ: 18–03–2016

## ಸುತ್ತೋಲೆ

ವಿಷಯ: ಪಾಲಿಕೆಯ ವ್ಯಾಪ್ತಿಯಲ್ಲಿ ಮನೆ ಮನೆಗಳಿಂದ ಶೇಖರಣೆಗೊಳ್ಳುವ ಹಾನಿಕಾರ ತ್ಯಾಜ್ಯ (ಜೈವಿಕ ಮತ್ತು ಸ್ಯಾನಿಟರಿ) - Domestic Hazardous waste (Bio- medical and sanitary ) ನಿರ್ವಹಣೆ ಕುರಿತು.

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿ ದಿನ ಸುಮಾರು 3500 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಪೌರಘನತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ 2000 ರಡಿಯಲ್ಲಿ ಘನತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಬೇಕಾಗಿರುತ್ತದೆ. ಈ ಕಾರ್ಯದಿಂದ ತ್ಯಾಜ್ಯವನ್ನು ಬಹುತೇಕವಾಗಿ ಮರು ಉಪಯೋಗ ಮಾಡಿಕೊಂಡು ಅಲ್ಪ ಪ್ರಮಾಣದ ನಿಷ್ಪಲ ತ್ಯಾಜ್ಯವನ್ನು ಭೂಭರ್ತಿ ಮಾಡಬೇಕಾಗಿರುತ್ತದೆ. ಈ ಕುರಿತಂತೆ ಈಗಾಗಲೇ ಪಾಲಿಕೆಯ ವ್ಯಾಪ್ತಿಯಲ್ಲಿ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲೇಯೇ ವಿಂಗಡಿಸಿ ನೀಡಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೂಚಿಸಲಾಗಿರುತ್ತದೆ.

1. ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:24739/2012ರ ದಿನಾಂಕ:17–12–2015ರಲ್ಲಿ ನಡೆದ ವಿಚಾರಣೆಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಹಸಿ, ಒಣ ಮತ್ತು ಹಾನಿಕಾರ ತ್ಯಾಜ್ಯಗಳನ್ನಾಗಿ ವಿಂಗಡಿಸುವಂತೆ ಸೂಚಿಸಲಾಗಿರುತ್ತದೆ. ಈಗಾಗಲೇ ಮೌಖಿಕವಾಗಿ ಹಲವಾರು ಬಾರಿ ಈ ಕುರಿತಂತೆ ತಮಗಳಿಗೆ ತಿಳಿಸಲಾಗಿರುತ್ತದೆ ಹಾಗೂ ಇನ್ನು ಮುಂದೆ ಇನ್ನೂ ಹೆಚ್ಚಿನ ಆದ್ಯತೆ ನೀಡಿ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಮನೆ ಮನೆಗಳಿಂದ ಶೇಖರಣೆಗೊಳ್ಳುವ ಹಾನಿಕಾರ ತ್ಯಾಜ್ಯ (ಜೈವಿಕ ಮತ್ತು ಸ್ಯಾನಿಟರಿ)ವನ್ನು ವಲಯವಾರು ಈ ಕೆಳಕಂಡ ಜೈವಿಕ ತ್ಯಾಜ್ಯವನ್ನು ಸಂಸ್ಕರಿಸುವ ಸಂಸ್ಥೆಗಳಿಗೆ ನೀಡಿ ಈ ಕೆಳಕಂಡಂತೆ ನಿರ್ವಹಿಸುವುದು.

| ಕ್ರಮ ಸಂಖ್ಯೆ | ಸಂಸ್ಥೆಗಳ ಹೆಸರು | ವಲಯ |
|---|---|---|
| 1 | ಮೆ॥ ಸೆಮ್ ರ್‍ಯಾಮ್ಕಿ ಎನ್ವಿರ್ನಮೆಂಟಲ್ ಮ್ಯಾನೇಜ್‌ಮೆಂಟ್ ಪ್ರೈ ಲಿ. | ಪಶ್ಚಿಮ ಮತ್ತು ಯಲಹಂಕ |
| 2. | ಮೆ॥ ಮೆರಿಡಿ ಎಕೋ ಇಂಡಸ್ಟ್ರೀಸ್ ಪ್ರೈ ಲಿ. | ದಕ್ಷಿಣ, ರಾ.ರಾ.ನಗರ ಮತ್ತು ದಾಸರಹಳ್ಳಿ |
| 3. | ಮೆ॥ ಮೀರಾ ಎನ್ವಿರೋಟೆಕ್ | ಬೊಮ್ಮನಹಳ್ಳಿ |
| 4. | ಮೆ॥ ಅನು ಆಟೋ ಕ್ಲೇವ್ ಮತ್ತು ಇನ್‌ಸಿನಿರೇಷನ್ ಸರ್ವೀಸಸ್ | ಪೂರ್ವ ಮತ್ತು ಮಹದೇವಪುರ |

2. ವಾರ್ಡಿನ ಅಧಿಕಾರಿ/ ಸಿಬ್ಬಂದಿಗಳಿಗೆ ಹಾನಿಕಾರ ತ್ಯಾಜ್ಯ ನಿರ್ವಹಣೆ ಕುರಿತಂತೆ ತಿಳಿಸಿ ಸಾರ್ವಜನಿಕರಲ್ಲಿ ಈ ಕುರಿತು ಪ್ರತ್ಯೇಕವಾಗಿ ಹಾನಿಕಾರಕ ತ್ಯಾಜ್ಯವನ್ನು ನೀಡುವಂತೆ ಅರಿವು ಮೂಡಿಸುವುದು.
3. ಎಲ್ಲಾ ಪ್ರಾಥಮಿಕ ಸಂಗ್ರಹಣಾ ವಾಹನಗಳಲ್ಲಿ (ತಳ್ಳುವ ಗಾಡಿಗಳು ಮತ್ತು ಆಟೋ ಟಿಪ್ಪರ್‌ಗಳಲ್ಲಿ) ಹಾನಿಕಾರಕ ತ್ಯಾಜ್ಯವನ್ನು ಸಂಗ್ರಹಿಸಲು ಜೈವಿಕ ತ್ಯಾಜ್ಯ ವಿಲೇವಾರಿ ಮಾಡುವ ಏಜೆನ್ಸಿಗಳು ನೀಡುವ ಕಲರ್ ಕೋಡೆಡ್ ಚೀಲಗಳ ವ್ಯವಸ್ಥೆಯನ್ನು ಕಲ್ಪಿಸುವುದು.
4. ಸಂಗ್ರಹಿಸಿದ ಹಾನಿಕಾರ ತ್ಯಾಜ್ಯವನ್ನು ಆಯಾ ವಲಯದ ಜಂಟಿ ಆಯುಕ್ತರು ವಾರ್ಡಿನ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರದಲ್ಲಿ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇಖರಿಸಲು ಗುರುತಿಸಿ ಪ್ರತ್ಯೇಕವಾಗಿ ಆ ಸ್ಥಳಗಳಲ್ಲಿ ಹಾನಿಕರ ತ್ಯಾಜ್ಯಗಳನ್ನು ಶೇಖರಿಸಲು ಸೂಕ್ತವಾದ ಕೆಂಪು ಬಿನ್‌ಗಳನ್ನು ಪ್ರಮಾಣದ ಅನುಸಾರ ಕಲ್ಪಿಸುವುದು.
5. ಶೇಖರಣೆಗೊಂಡ ತ್ಯಾಜ್ಯವನ್ನು, ಜೈವಿಕ ತ್ಯಾಜ್ಯವನ್ನು ಸಂಸ್ಕರಿಸುವ ಸಂಸ್ಥೆಗಳಿಗೆ ನೀಡುವುದು.
6. ಪ್ರತಿದಿನ ಸಂಗ್ರಹವಾಗುವ ಹಾನಿಕಾರ ತ್ಯಾಜ್ಯದ ಪ್ರಮಾಣವನ್ನು ಕೇಂದ್ರಗಳಲ್ಲಿ ದಾಖಲೆ ಪುಸ್ತಕದಲ್ಲಿ ನಮೂದಿಸಿ ನಿರ್ವಹಿಸುವುದು.
7. ಸದರಿ ಏಜೆನ್ಸಿಗಳು ಪ್ರತಿದಿನ ಆಯಾ ಒಣತ್ಯಾಜ್ಯ ಸಂಗ್ರಹಣ ಕೇಂದ್ರದಿಂದ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹಾನಿಕಾರ ತ್ಯಾಜ್ಯವನ್ನು ಸಮರ್ಪಕವಾಗಿ ಸಾಗಾಣಿಕೆ ಮಾಡಿ ವಿಲೇವಾರಿ ಮಾಡುವ ಕುರಿತು ಮೇಲುಸ್ತುವಾರಿ ನಡೆಸುವುದು.

ಸದರಿ ಆದೇಶವು ಈ ತಕ್ಷಣದಿಂದಲೇ ಜಾರಿಗೆ ಬಂದಿದ್ದು, ಹಾನಿಕಾರ ತ್ಯಾಜ್ಯವನ್ನು ಮೇಲೆ ತಿಳಿಸಿರುವಂತೆ ಕಟ್ಟುನಿಟ್ಟಾಗಿ ನಿರ್ವಹಿಸುವಂತೆ ಕ್ರಮವಹಿಸಲು ಆದೇಶಿಸಿದೆ.

18.3.11

ವಿಶೇಷ ಆಯುಕ್ತರು (ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,
1. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ಮತ್ತು ಅಧೀಕ್ಷಕ ಅಭಿಯಂತರರು

ಪ್ರತಿಯನ್ನು:

- ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ಜಂಟಿ ಆಯುಕ್ತರು (ಆ & ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಕಛೇರಿ ಪ್ರತಿ.